# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-3439/2015/ಡಿಆರ್ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 28/2/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಕೊಂಚೆ ಶಿವರುದ್ರಪ್ಪ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, ಇವರು ಸಲ್ಲಿಸಿರುವ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ವರದಿಯನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

******

1. ಶ್ರೀ.ಕೊಂಚೆ ಶಿವರುದ್ರಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿ, ರಾಷ್ಟ್ರೀಯ ಕಿಸಾನ್ ಸಂಘ, ಯಶಸ್ವಿನಿ ನಿಲಯ, ಕೂನಬೇವು, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ಎನ್.ಎಸ್.ಲೋಹಿತ್‌ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಿದರಕೆರೆ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, ಮತ್ತು (2) ಶ್ರೀ.ಪ್ರಭುಸ್ವಾಮಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಜಗಳೂರು ತಾಲ್ಲೂಕು ಪಂಚಾಯಿತಿ, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಬಿದರಿಕೆರೆ ಗ್ರಾಮ ಪಂಚಾಯಿತಿಯ ಮಠದ ದ್ಯಾಮನಹಳ್ಳಿ ಗ್ರಾಮದ ಸರ್ವ ಋತು ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ ದ್ಯಾಮನಹಳ್ಳಿ ಗ್ರಾಮದ ಎಂ.ಸಿ.ತಿಪ್ಪೇಸ್ವಾಮಿ ಮನೆಯಿಂದ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗೆ ರೂ.1,39,880/-, ದ್ಯಾಮನಹಳ್ಳಿ ಸೇಂಧಿವನದಲ್ಲಿ ಚೆಕ್ ಡ್ಯಾಂ ನಿರ್ಮಾಣವನ್ನು ಕಳಪೆ ಕಾಮಗಾರಿ ಮಾಡಿ, ಅಳತೆ ಪುಸ್ತಕದಲ್ಲಿ ದಾಖಲಿಸಿ, ಅಳತೆ ಕಾಮಗಾರಿ ನಿರ್ವಹಿಸದೆ ಜೆ.ಸಿ.ಬಿ.ಯಂತ್ರ ಬಳಸಿ ಕಾಮಗಾರಿ ನಿರ್ವಹಿಸಿ ರೂ.1,89,869/- ಮತ್ತು ರೂ.1,49,715/- ಖರ್ಚು ಮಾಡಿರುತ್ತಾರೆ. ಹಾಗೂ ನಿಬಗೂರು ಗ್ರಾಮದ ಗುರುಪ್ಪ ಜಮೀನಿನಿಂದ ಕೆ.ಹನುಮಂತಪ್ಪರವರ ಜಮೀನಿನವರೆಗೆ ಇರುವ ಹಳ್ಳದ ಹೂಳೆತ್ತುವ ಕಾಮಗಾರಿಗೆ ರೂ.1,89,507/-, ನಿಬಗೂರು ಗ್ರಾಮದ ದರ್ಗಾದಿಂದ ಎ.ಕೆ.ಹಟ್ಟಿ ರಾಮಣ್ಣರವರ ಮನೆವರೆಗೆ ರಸ್ತೆ ನಿರ್ಮಾಣ ಕಾಮಗಾರಿಗೆ ರೂ.1,98,071/-, ಮಾಕುಂಟೆ ಗ್ರಾಮದ ಪಲ್ಲಾಗಟ್ಟೆ ತಿಪ್ಪೇಸ್ವಾಮಿ ಜಮೀನಿನಿಂದ ರಂಗಸ್ವಾಮಿ ದೇವಸ್ಥಾನಕ್ಕೆ ರಸ್ತೆ ನಿರ್ಮಾಣ ಕಾಮಗಾರಿಗೆ ರೂ.2,98,431/- ಮತ್ತು ಮಠದ ದ್ಯಾಮನಹಳ್ಳಿಯ ಗೋಕಟ್ಟೆಗೆ ಹೋಗುವ ಫೀಡರ್ ಚಾನಲ್ ನಿರ್ಮಾಣ ಕಾಮಗಾರಿಗೆ ರೂ.70,268/-ಗಳನ್ನು ಪಡೆದಿದ್ದು, ಕಾಮಗಾರಿಗಳನ್ನು ಸರಿಯಾಗಿ ನಿರ್ವಹಿಸದೆ, ದಾಖಲೆಗಳನ್ನು ಸೃಷ್ಟಿಸಿ, ಸರ್ಕಾರದ ಹಣವನ್ನು

ದುರುಪಯೋಗ ಪಡಿಸಿಕೊಂಡಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿ 2013-14ನೇ ಸಾಲಿನ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಅನುಷ್ಠಾನಗೊಂಡ ಕಾಮಗಾರಿಗಳ ಮೇಲೆ ದಾವಣಗೆರೆ ಜಿಲ್ಲೆಯ ಒಟ್ಟು 85 ಗ್ರಾಮಪಂಚಾಯಿತಿಗಳಲ್ಲಿ ವಿಶೇಷ ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸಿದ್ದು, ಅದರಲ್ಲಿ ಜಗಳೂರು ತಾಲ್ಲೂಕಿನ 22 ಗ್ರಾಮಪಂಚಾಯಿತಿಗಳ ಪೈಕಿ 25,000 ಕ್ಕಿಂತ ಹೆಚ್ಚು ಮಾನವ ದಿನಗಳನ್ನು ಸೃಜಿಸಿದ 19 ಗ್ರಾಮಪಂಚಾಯಿತಿಗಳಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆ ನಡೆದಿದ್ದು, ಅವುಗಳಲ್ಲಿ ಬಿದರಿಕೆರೆ ಗ್ರಾಮಪಂಚಾಯಿತಿ ಕೂಡ ಒಂದಾಗಿರುತ್ತದೆ. ಅದರಂತೆ ಬಿದರಕೆರೆ ಗ್ರಾಮಪಂಚಾಯಿತಿಯಲ್ಲಿ ವಿಶೇಷ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಯಾವುದೇ ತಾಂತ್ರಿಕ ಪರಿಣತಿ ಇಲ್ಲದ ವ್ಯಕ್ತಿಯು ಅನುಷ್ಠಾನ ಅಧಿಕಾರಿಗಳಿಂದ ಮಾಹಿತಿ ಪಡೆಯದೆ ಹಾಗೂ ಅವರ ಅನುಪಸ್ಥಿತಿಯಲ್ಲಿ ಗ್ರಾಮಪಂಚಾಯಿತಿಯ ಮಾಹಿತಿ ಇಲ್ಲದ ಇತರೆ ಸಿಬ್ಬಂದಿಯಿಂದ ಮಾಹಿತಿ ಪಡೆದು ದೋಷಪೂರಿತ ವರದಿಯನ್ನು ತಯಾರಿಸಿ ಜಿಲ್ಲಾ ಪಂಚಾಯತ್ ದಾವಣಗೆರೆ ಇವರಿಗೆ ಸಲ್ಲಿಸಿರುತ್ತಾರೆ. ಮೇಲ್ಕಂಡ ದೋಷಪೂರಿತ ವರದಿಯಲ್ಲಿ ವಸೂಲಾತಿಗೆ ಸೂಚಿಸಿರುವ ಹಣವನ್ನು ವಾಪಸ್ ಭರಿಸಿಯೆಂದು ಜಿಲ್ಲೆಯ 85 ಗ್ರಾಮಪಂಚಾಯಿತಿಗಳ ಎಲ್ಲಾ ಹಂತದ ಅನುಷ್ಠಾನಾಧಿಕಾರಿಗಳಿಗೆ ಆದೇಶವನ್ನು ದಿ.5/12/14 ರ ಆದೇಶದಲ್ಲಿ ತಿಳಿಸಲಾಗಿತ್ತು. ಜಿಲ್ಲಾ ಪಂಚಾಯತ್ ಆದೇಶದ ವಿರುದ್ಧ ಅನುಷ್ಠಾನಾಧಿಕಾಇರಗಳು ಆಡಳಿತಾತ್ಮಕ ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡು ತಡೆಯಾಜ್ಞೆಯನ್ನು ಪಡೆದಿರುತ್ತಾರೆ. ಇದರನ್ವಯ ಜಿಲ್ಲಾ ಪಂಚಾಯತ್ ದಾವಣಗೆರೆಯ ಎಲ್ಲಾ 85 ಗ್ರಾಮಪಂಚಾಯಿತಿಗಳ ಮೇಲೆ ಇಲಾಖಾ ವಿಚಾರಣಾಧಿಕಾರಿಗಳನ್ನು ನೇಮಿಸಿ ಇಲಾಖಾ ವಿಚಾರಣೆಯನ್ನು ನಡೆಸುತ್ತಿದೆಯೆಂದು ಹೇಳಿರುತ್ತಾರೆ.

4. 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ 2013-14ನೇ ಸಾಲಿನಲ್ಲಿ ಅವರು ಜಗಳೂರು ತಾಲ್ಲೂಕು ಪಂಚಾಯತ್ ಕಚೇರಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಸೇವೆ ಸಲ್ಲಿಸಿರುವುದಿಲ್ಲ. ಸರ್ಕಾರದ ಅಧಿಸೂಚನೆಯಂತೆ ದಿ.29/1/13 ರ ಆದೇಶದಂತೆ ಜಗಳೂರು ತಾಲ್ಲೂಕು ಪಂಚಾಯತ್, ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಿಂದ ವರ್ಗಾವಣೆಗೊಂಡಿರುತ್ತಾರೆಂದು ಹೇಳಿರುತ್ತಾರೆ.

5. ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ತನ್ನ ಪ್ರತ್ಯುತ್ತರದಲ್ಲಿ ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು, ಬಿದರಿಕೆರೆ ಗ್ರಾಮಪಂಚಾಯಿತಿ ವಿರುದ್ಧ 14 ಕಾಮಗಾರಿಗಳ ದಾಖಲೆಯೊಂದಿಗೆ ರೂ.14,55,496/- ಗಳನ್ನು ವಸೂಲಿ ಮಾಡುವಂತೆ ಮತ್ತು ಆಯುಕ್ತರ ಆದೇಶದಂತೆ ವಸೂಲಿ ಮಾಡಿ ನಿಯಮ 11 ಸರ್ಕಾರದ ಸುತ್ತೋಲೆ ಪ್ರಕಾರ ಸಾಮಾಜಿಕ ಲೆಕ್ಕ ಪರಿಶೋಧನಾ ವರದಿಯ ಆಧಾರದ ಮೇಲೆ ಬಿದರಿಕೆರೆ ಗ್ರಾಮಪಂಚಾಯಿತಿಯ

ಪಿ.ಡಿ.ಓ., ಕಾರ್ಯದರ್ಶಿ, ಬಿಲ್ ಕಲೆಕ್ಟರ್, ಕಂಪ್ಯೂಟರ್ ಆಪರೇಟರ್, ಎ.ಇ.ಇ., ಇಂಜಿನಿಯರ್ ಮತ್ತು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರ ಮೇಲೆ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ಮೇರೆಗೆ ತನಿಖೆ ಮಾಡಿ ಅಪರಾಧ ಸಾಬೀತಾಗಿ 14 ಕಾಮಗಾರಿಗಳ ಬಾಬ್ತು ರೂ.14,55,496/- ಗಳನ್ನು ಪಾವತಿಸುವಂತೆ ಆದೇಶ ಮಾಡಿರುತ್ತಾರೆ. ಅವರ ಮೇಲಿನ ಆರೋಪ ಸಾಬೀತಾಗಿದ್ದು, ಈಗಾಗಲೇ ಜಿಲ್ಲಾ ಪಂಚಾಯತ್, ದಾವಣಗೆರೆ ಯವರು ವಿವರಗಳನ್ನು ಸಲ್ಲಿಸಿರುತ್ತಾರೆ. ಇದರ ಜೊತೆ ಉಳಿದ ಗ್ರಾಮಪಂಚಾಯಿತಿಗಳು ರೂ.2 ಕೋಟಿಗೂ ಹೆಚ್ಚಿನ ಹಣ ದುರುಪಯೋಗ ಪಡಿಸಿಕೊಂಡಿದ್ದು, ಅವುಗಳ ವಿರುದ್ಧ ಕೂಡ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

6. ದೂರುದಾರರು ತಮ್ಮ ಪ್ರತ್ಯುತ್ತರದ ಜೊತೆ ದಿ.5/12/14 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ದಾವಣಗೆರೆ ಇವರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಜಗಳೂರು ಇವರಿಗೆ ನೀಡಿರುವ ಅಧಿಕೃತ ಜ್ಞಾಪನಾ ಪತ್ರದ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಅದನ್ನು ಪರಿಶೀಲಿಸಿದಾಗ, ಸರ್ಕಾರದ ಹಣ ದುರುಪಯೋಗವಾಗಲು, ಅನುಚಿತವಾಗಿ ಬಳಕೆಯಾಗಲು ಕಾರಣರಾದ ಹಾಗೂ ಇತರ ಆರ್ಥಿಕ ಅಪರಾಧ ಎಸಗಿರುವವರ ಮೇಲೆ ವಿಶೇಷ ಸಾಮಾಜಿಕ ಪರಿಶೋಧನೆ ವರದಿಯ ಆಧಾರದ ಮೇಲೆ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲು ಸೂಚಿಸಿರುವುದು ಕಂಡುಬರುತ್ತದೆ. ಆದ್ದರಿಂದ, ಹಣ ದುರುಪಯೋಗ ಪಡಿಸಿಕೊಂಡ ಅಧಿಕಾರಿಗಳ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆಯೆನ್ನುವ ಬಗ್ಗೆ ವರದಿ ನೀಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ ಇವರಿಗೆ ಆದೇಶಿಸಲಾಗಿತ್ತು.

7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ ಇವರು ವರದಿಯನ್ನು ನೀಡಿದ್ದು, ವರದಿಯಲ್ಲಿ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ 19 ಗ್ರಾಮಪಂಚಾಯಿತಿಗಳಲ್ಲಿ ಸಾಮಾಜಿಕ ಪರಿಶೋಧನಾ ವರದಿಯಲ್ಲಿ ತಿಳಿಸಿರುವಂತೆ ಆ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ ಸಂಬಂಧಿಸಿದ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ, ಅಧ್ಯಕ್ಷರು ಅಳತೆ ಪುಸ್ತಕದಲ್ಲಿ ಕಾಮಗಾರಿ ಅಳತೆಯನ್ನು ದಾಖಲಿಸಿದ ಕಿರಿಯ ಇಂಜಿನಿಯರ್/ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ ಇತರೆ ಅನುಷ್ಠಾನ ಇಲಾಖೆಯ ಅಧಿಕಾರಿಗಳನ್ನು ಗುರುತಿಸಿ ಅವರಿಗೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಿ ವಸೂಲಾತಿ ಪ್ರಕ್ರಿಯೆಯನ್ನು ಜರುಗಿಸುವಂತೆ ಹಾಗೂ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಳ್ಳಲು ಕಾರಣರಾದವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಪ್ರಕರಣದಲ್ಲಿ ಭಾಗಿಯಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ/ ಕಿರಿಯ ಇಂಜಿನಿಯರ್/ಸಹಾಯಕ ಇಂಜಿನಿಯರ್‌ಗಳ ವಿರುದ್ಧದ ವಸೂಲಾತಿಗೆ ಸೂಚಿಸಿದ ಮೊತ್ತಕ್ಕೆ ಸಂಬಂಧಿಸಿದಂತೆ 38 ಜನ ಅಧಿಕಾರಿಗಳು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾವೆಯನ್ನು ಹೂಡಿದ್ದು, ಸದರಿ ದಾವೆಯಲ್ಲಿ ಕರ್ನಾಟಕ ಆಡಳಿತ

ನ್ಯಾಯ ಮಂಡಳಿ ಆದೇಶವನ್ನು ಮಾಡಿದ್ದು, ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಹಾಗೂ ಮೇಲ್ಮನವಿ) ನಿಯಮಗಳು 1957 ನಿಯಮ 11 ರಡಿ ಇಲಾಖಾ ವಿಚಾರಣೆಯನ್ನು ನಡೆಸದೆ ಹಣ ವಸೂಲಾತಿಗೆ ಆದೇಶಿಸಿರುವುದನ್ನು ಮಾನ್ಯ ನ್ಯಾಯಾಲಯವು ಗಮನಿಸಿ ಆದೇಶವನ್ನು ವಜಾ ಮಾಡಿ ಆದೇಶಿಸಿದೆ. ಈ ಎಲ್ಲಾ ಪ್ರಕರಣಗಳಲ್ಲಿ ಭಾಗಿಯಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ/ಕಿರಿಯ ಇಂಜಿನಿಯರ್/ಸಹಾಯಕ ಇಂಜಿನಿಯರ್‌ಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಹಾಗೂ ಮೇಲ್ಮನವಿ) ನಿಯಮಗಳು 1957 ನಿಯಮ 11 ರಡಿ ಇಲಾಖಾ ವಿಚಾರಣೆ ನಡೆಯುತ್ತಿದ್ದು, ಇಲಾಖಾ ವಿಚಾರಣೆಯು ಅಂತಿಮ ಹಂತದಲ್ಲಿರುತ್ತದೆ. ಮೇಲ್ಕಂಡ ನೌಕರರ ವಿರುದ್ಧ ಇಲಾಖಾ ವಿಚಾರಣೆಯಲ್ಲಿ ಹಣ ದುರುಪಯೋಗದ ಆರೋಪಗಳು ಸಾಬೀತಾದಲ್ಲಿ ಅವರ ವಿರುದ್ಧ ಮುಂದಿನ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿರುತ್ತಾರೆ.

8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ ಇವರು ತಮ್ಮ ಮುಂದುವರೆದ ವರದಿಯಲ್ಲಿ ಈ ಪ್ರಕರಣದಲ್ಲಿ ಭಾಗಿಯಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ/ಕಿರಿಯ ಇಂಜಿನಿಯರ್/ ಸಹಾಯಕ ಇಂಜಿನಿಯರ್‌ಗಳ ವಿರುದ್ಧದ ವಸೂಲಾತಿಗೆ ಸೂಚಿಸಿದ ಮೊತ್ತಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಈ ಕೆಳಕಂಡ ನೌಕರರು ವಿವಿಧ ದಿನಾಂಕದಂದು ದಾವೆಗಳನ್ನು ಹೂಡಿರುತ್ತಾರೆ. ಮಾನ್ಯ ನ್ಯಾಯಾಲಯವು ಈ ಕಚೇರಿಯ ಆದೇಶಕ್ಕ ತಡೆಯಾಜ್ಞೆ ನೀಡಿರುತ್ತದೆ. ಮಾನ್ಯರ ಆಯುಕ್ತರ ಪತ್ರ ಸಂ.ಗ್ರಾಅಪ:492:ಉಖಾಯೋ:2014 ದಿ.29/5/14 ರ ಪತ್ರದಲ್ಲಿ ಸಾಮಾಜಿಕ ಪರಿಶೋಧನೆಯಲ್ಲಿ ವಸೂಲಾತಿಗೆ ಸೂಚಿಸಿದ್ದಲ್ಲಿ ಸಂಬಂಧಪಟ್ಟವರಿಂದ ವಸೂಲಿ ಮಾಡತಕ್ಕದ್ದು, ವಿಫಲವಾದಲ್ಲಿ ಎಫ್.ಐ.ಆರ್.ದಾಖಲಿಸತಕ್ಕದ್ದು ಎಂದು ಸೂಚಿಸಿತ್ತು. ವಸೂಲಾತಿಗೆ ತಡೆಯಾಜ್ಞೆ ತಂದ ಹಿನ್ನೆಲೆಯಲ್ಲಿ ವಸೂಲಾತಿ ಆಗದೇ ಇರುವ ಬಗ್ಗೆ ನಿರ್ಣಯಿಸಲಿಕ್ಕಾಗದು. ಆದ್ದರಿಂದ, ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಆಗುವ ಆದೇಶವನ್ನು ಅವಲಂಭಿಸಿರುತ್ತದೆ. ಆದ್ದರಿಂದ, ಎಫ್.ಐ.ಆರ್. ದಾಖಲಿಸಿರುವುದಿಲ್ಲ. ಈ ಪ್ರಕರಣದಲ್ಲಿ ಭಾಗಿಯಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ/ಕಿರಿಯ ಇಂಜಿನಿಯರ್/ ಸಹಾಯಕ ಇಂಜಿನಿಯರ್‌ಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಹಾಗೂ ಮೇಲ್ಮನವಿ) ನಿಯಮಗಳು 1957 ನಿಯಮ 11 ರಡಿ ಇಲಾಖಾ ವಿಚಾರಣೆಯು ನಡೆಯುತ್ತಿದ್ದು, ಈಗಾಗಲೇ ಮುಖ್ಯ ವಿಚಾರಣೆ ಮುಕ್ತಾಯವಾಗಿರುತ್ತದೆ. ಆಪಾದಿತ ನೌಕರರ ಮತ್ತು ಮಂಡನಾಧಿಕಾರಿಗಳ ಹೇಳಿಕೆಯನ್ನು ಪಡೆಯಲಾಗಿದೆ. ವಿಚಾರಣಾ ವರದಿಯನ್ನು ಪೂರ್ಣಗೊಳಿಸಿ ನೌಕರರ ವಿರುದ್ಧದ ಆರೋಪಗಳು ಸಾಬೀತಾದಲ್ಲಿ, ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ಕರ್ನಾಟಕ ನಾಗರೀಕ ಸೇವಾ (ವ.ನಿ.&ಮೇ) ನಿಯಮಗಳು 1957 ರ ನಿಯಮ 8 ರಡಿ ಬರುವ ಸೂಕ್ತ ದಂಡನೆಯನ್ನು ವಿಧಿಸಿ ವಿವರವಾದ ವರದಿಯನ್ನು ಸಲ್ಲಿಸಲಾಗುವುದೆಂದು ತಿಳಿಸಿರುತ್ತಾರೆ.

9. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಇವರು ನೀಡಿರುವ ವರದಿಯನ್ನು ಪರಿಶೀಲಿಸಿದಾಗ, ಸುಮಾರು 38 ಜನ ನೌಕರರು/ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿರುವ ಬಗ್ಗೆ ತಿಳಿಸಿದ್ದು, ಆದರೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ದುರುಪಯೋಗವಾದ ಮೊತ್ತವನ್ನು ವಸೂಲಾತಿ ಮಾಡುವ ಬಗ್ಗೆ ಹಾಗೂ ದುರುಪಯೋಗ ಪಡಿಸಿಕೊಂಡಿರುವ ಅಧಿಕಾರಿ/ನೌಕರರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸುವ ಬಗ್ಗೆ ಯಾವುದೇ ಕ್ರಮವನ್ನು ವಹಿಸಿರುವುದು ಕಂಡುಬರುತ್ತಿಲ್ಲ. ಕಡತವನ್ನು ಪರಿಶೀಲಿಸಿದಾಗ, ದುರುಪಯೋಗವಾಗಿರುವ ಸರ್ಕಾರಿ ಹಣದ ವಸೂಲಾತಿ ಹಾಗೂ ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ಹೂಡುವುದು ಸೂಕ್ತವಾಗಿದೆಯೆಂದು ಕಂಡುಬರುತ್ತದೆ.

10. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಪ್ಪಿತಸ್ಥ ಅಧಿಕಾರಿ/ನೌಕರರಿಂದ ದುರುಪಯೋಗವಾದ ಹಣವನ್ನು ವಸೂಲಿ ಮಾಡುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಕ್ರಿಮಿನಲ್ ಪ್ರಕರಣ ಹೂಡುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/2/18

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**